**CC 485/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್** 485/2023

**ಸಿ ಡಬ್ಲೂ 1**

**ಪಿ ಡಬ್ಲೂಃ 4**

**ಸಾಕ್ಷಿಯ ಹೆಸರು - ಈ ಕೊದಂಡ ಪಾಣಿ**
**ತಂದೆಯ ಹೆಸರು - ಯತಿರಾಜ**
**ವಯಸ್ಸು -** 59 **ವರ್ಷಗಳು**
**ಉದ್ಯೋಗ - ಪಿ ಎಸ್ ಐ ಬಡಾವಣೆ ಪೋಲಿಸ್ ಠಾಣೆ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ** 06-03-2026 **ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು **2019** ರಿಂದ **2023** ರವರೆಗೆ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **06-01-2023** ರಂದು ಮಧ್ಯಾಹ್ನ **3.15** ಗಂಟೆಗೆ ನಾನು ಠಾಣೆಯಲ್ಲಿದ್ದಾಗ ತರಕಾರಿ ಮಾರುಕಟ್ಟೆ ಹತ್ತಿರ ಸಾರ್ವಜನಿಕ ಸ್ಥಳದಲ್ಲಿ ಮಟಕಾ ಜೂಜಾಟ ನಡೆಯುತ್ತಿದೆ ಎಂದು ಮಾಹಿತಿ ಬಂದಿತ್ತು. ನಾನು ಚಾಸಾ **4** ರವರ ಮೂಲಕ ಚಾಸಾ **-2** ಮತ್ತು **3** ರವರನ್ನು ಕರೆಯಿಸಿ ಪಂಚರಿಗೆ ಮತ್ತು ಸಿಬ್ಬಂದಿಗಳಿಗೆ ಮಾಹಿತಿ ನೀಡಿರುತ್ತೇನೆ. ನಂತರ ಪಂಚರು ಮತ್ತು ಸಿಬ್ಬಂದಿಗಳನ್ನು ಕರೆದುಕೊಂಡು ಮಧ್ಯಾಹ್ನ **3.45** ಗಂಟೆಗೆ ಠಾಣೆಯಿಂದ ಹೊರಟು **4.00** ಗಂಟೆಗೆ ಬಾತ್ಮಿ ಬಂದ್ದ ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಒಬ್ಬ ವ್ಯಕ್ತಿ ರೂ. **1** ಕ್ಕೆ ರೂ. **80/-** ಗಳನ್ನು ಕೊಡುವುದಿಾಗಿ ಸಾರ್ವಜನಿಕರನ್ನು ಮಟಕಾ ಆಡಲು ಕೂಗಿ ಕರೆಯುತ್ತಿದ್ದ. ಆತನನ್ನು ಹಿಡಿದು ವಿಚಾರಿಸಿದಾಗ ತನ್ನ ಹೆಸರು ಬೆಳಗೋಡು ಹುಲುಗಪ್ಪ ಎಂದು ತಿಳಿಸಿದ. ಆತನ ಬಳಿ ಒಂದು ಮಟಕಾ ಪಟ್ಟಿ, ಒಂದು ಬಾಲ್ ಪೆನ್ನು ಮತ್ತು ರೂ.

**2540/-** ಗಳು ದೂರೆತವು. ಸದರಿ ಮಟಕಾ ಪಟ್ಟಿ ಮತ್ತು ಹಣವನ್ನು ತಳವಾರಕೇರಿಯ ದುರ್ಗಮ್ಮ ರವರಿಗೆ ಕೊಡುವುದಾಗಿ ತಿಳಿಸಿದ್ದ. ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಮೇಲೆ ಹೇಳಿದ ಮುದ್ದೆಮಾಲುಗಳನ್ನು ಜಪ್ತು ಪಡಿಸಿಕೊಂಡೆ. ಸದರಿ ಪಂಚನಾಮೆ ನೋಡಿ ಗುರುತಿಸುತ್ತೇನೆ, ಸಾಕ್ಷಿ ಪಂಚನಾವೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **1** ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿಃ **1(**ಸಿ**)** ಎಂದು ಗುರುತಿಸಲಾಯಿತು. ಸ್ಥಳದ ನಕಾಶೆಯನ್ನು ತಯಾರಿಸಿರುತತೇನೆ. ಸಾಕ್ಷಿ ನಕಾಶೆ ನೋಡಿ ಗುರುತಿಸಿದ್ದು, ಅದನ್ನು ನಿಪಿಃ **2** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **2(**ಎ**)** ಎಂದು ಗುರುತಿಸಲಾಯಿತು. ವಶಪಡಿಸಿಕೊಂಡಿದ್ದ ಆರೋಪಿಯನ್ನು ಕರೆದುಕೊಂಡು, ಮುದ್ದೆಮಾಲನ್ನು ತೆಗೆದುಕೊಂಡು ಠಾಣೆಗೆ ಹಿಂತಿರುಗಿ ಚಾಸಾ **-11** ರವರಿಗೆ ದೂರಿನೊಂದಿಗೆ ನೀಡಿರುತ್ತೇನೆ. ಸದರಿ ದೂರನ್ನು ನೋಡಿದರೆ ಗುರುತಿಸುತೆತೇನೆ. ಸಾಕ್ಷಿ ದೂರು ನೋಡಿ ಗುರುತಿಸಿದ್ದು, ಅದನ್ನು ನಿಪಿಃ **3** ಎಂದು, ಸಾಕ್ಷಿಯ ಸಹಿಯನ್ನು ನಿಪಿಃ **3(**ಎ**)** ಎಂದು ಗುರುತಿಸಲಾಯಿತು. ಮುದ್ದೆಮಾಲನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಮುದ್ದೆಮಾಲು **1** ರಿಂದ **3** ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ **1** ನೇ ಆರೋಪಿಯನ್ನು ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಎಸ್.ಎಚ್ ವಕೀಲರಿಂದ**

ಠಾಣೆಯಿಂದ ಗುನ್ನಾ ಸ್ಥಳಕ್ಕೆ ದ್ವಿಚಕ್ರ ವಾಹನಗಳಲ್ಲಿ ಹೋಗಿದ್ದೆವು. ದೂರಿನಲ್ಲಿ ದ್ವಿಚಕ್ರ ವಾಹನಗಳಲ್ಲಿ ಸ್ಥಳಕ್ಕೆ ಹೋದೇವು ಎಂದು ಬರೆಸಿಲ್ಲ ಅಂದರೆ ಸರಿ. ತರಕಾರಿ ಮಾರಾಕಟ್ಟೆಯಲ್ಲಿ ಸಾಕಷ್ಟು ಜನಸಂದಣಿ ಇರುತ್ತದೆ ಅಂದರೆ ಸರಿ. ನಾವು ಆರೋಪಿಯನ್ನು **30-40** ಮೀಟರ್ ಅಂತರದಿಂದ ನೋಡಿರುತ್ತೇವೆ. ಅಲ್ಲಿ

**CC 485/2023**

ಸಾಕಷ್ಟು ಜನ ಸೇರಿದ್ದರು, ನಿಖರವಾಗಿ ಜನರ ಸಂಖ್ಯೆ ಗೊತ್ತಿಲ್ಲ. ಆರೋಪಿಯನ್ನು ನಾನೇ ಹಿಡಿದು ಅಂಗಶೋಧನೆ ಮಾಡಿರುತ್ತೇನೆ. ದೂರಿನಲ್ಲಿ ಮತ್ತು ಪಂಚನಾಮೆಯಲ್ಲಿ ಯಾವ ವ್ಯಕ್ತಿ ಯಾವ ನಂಬರ್ ಗೆ ಎಷ್ಟು ಜೂಜು ಆಡಿದ್ದ ಎಂದು ನಮೂದು ಮಾಡಿಲ್ಲ. ನಾವುಗಳು ಆ ದಿನ ಸ್ಥಳಕ್ಕೆ ಹೋಗಿಲ್ಲ, ಆರೋಪಿ ಸ್ಥಳದಲ್ಲಿ ಇರಲಿಲ್ಲ, ದಾಳಿ ಮಾಡಿ ಆರೋಪಿಯಿಂದ ಮುದ್ದೆಮಾಲುಗಳನ್ನು ಜಪ್ತು ಪಡಿಸಿಕೊಂಡೆವು ಅಂದರೆ ಸರಿಯಲ್ಲ. ನಿಪಿಃ 1 ಅನ್ನು ಠಾಣೆಯಲ್ಲಿಯೇ ತಯಾರಿಸಿರುತ್ತೇವೆ ಅಂದರೆ ಸರಿಯಲ್ಲ. ಆರೋಪಿಗೂ ಮುದ್ದೆಮಾಲಿಗೂ ಸಂಬಂಧ ಇಲ್ಲ ಅಂದರೆ ಸರಿಯಲ್ಲ. ಠಾಣೆಯ ಅಂಕಿ ಅಂಶಗಳಿಗಾಗಿ ಸುಳ್ಳು ದೂರನ್ನು ನೀಡಿರುತ್ತೇನೆ ಅಂದರೆ ಸರಿಯಲ್ಲ. ನಾನು ಯಾವುದೇ ಘಟನೆಯನ್ನು ನೋಡದಿದ್ದರೂ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣದ ದಾಖಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.